ಮಳವಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿದ್ದಾಗ, ಆಗ ಮಳವಳ್ಳಿ ಕ್ಷೇತ್ರ double constituency ಆಗಿತ್ತು ಮಲ್ಲಿಕಾರ್ಜುನ ಸ್ವಾಮಿಯವರು ಮತ್ತು ಇವರು ಒಂದೇ constituency ಯಲ್ಲಿ ಸ್ಪರ್ಧೆ ಮಾಡುತ್ತಿದ್ದರು, ಅವತ್ತಿನ ದಿವಸ ನಿಮ್ಮ ಊರಿಗೆ ಬಂದಾಗ ನಿಮ್ಮ ತಂದೆಯವರು, ನೀವು ಬಹಳ ಕಡೆ ಓಡಾಡಬೇಕಾಗುತ್ತದೆ, ಈಗ ನಮ್ಮ ಕಡೆಗೆ ಬಂದಿದ್ದೀರಿ, ಇಲ್ಲಿಯ 3–4 ಹಳ್ಳಿಗಳ ಕಡೆಗೆ ನೀವು ಮತ್ತೆ ಬರಬೇಡಿ, ನಾವೇ ಎಲ್ಲವನ್ನೂ ನೋಡಿಕೊಳ್ಳುವುದಾಗಿ ಹೇಳಿದ್ದರು, ಅದರಂತೆಯೇ ಅವರು ಪ್ರಮಾಣಿಕತೆಯಿಂದ ಕೆಲಸ ಮಾಡಿದರು ಎಂದು ಹೇಳಿದರು. ಒಂದು ಸಣ್ಣ ಉಪಕಾರವನ್ನು ಸಹ ಸ್ಮರಿಸುವಂತಹ ದೊಡ್ಡ ರಾಜಕಾರಣಿ ಅವರಾಗಿದ್ದರು. ಇವತ್ತಿನ ದಿವಸ ಎಷ್ಟೋ ದೊಡ್ಡ ರಾಜಕಾರಣಿಗಳು ದೊಡ್ಡ ಉಪಕಾರವನ್ನೇ ಸ್ಮರಿಸುವುದಿಲ್ಲ ಅಂತಹ ವ್ಯಕ್ತಿಗಳನ್ನು ಇವತ್ತಿನ ದಿವಸ ನೋಡುವುದು ಬಹಳ ಅಪರೂಪ. ಮಂಡ್ಯ ಜಿಲ್ಲೆಯ ರಾಜಕೀಯ ಹೆಚ್. ವಿ. ವೀರೇಗೌಡರ ನಿಧನದಿಂದಾಗಿ ತುಂಬಾ ಬಡವಾಗಿದೆ ಎಂದು ನಾನು ಭಾವಿಸುತ್ತೇನೆ. ಅವರ ನಿಧನಕ್ಕೆ ಸಂತಾಪವನ್ನು ಈ ಸಭೆಯಲ್ಲಿ ಸೂಚಿಸುತ್ತಾ, ಅವರ ಕುಟುಂಬ ವರ್ಗದವರಿಗೆ ಅವರ ನಿಧನದಿಂದ ಉಂಟಾಗಿರುವಂತಹ ದುಃಖವನ್ನು ಭರಿಸತಕ್ಕ ಶಕ್ತಿಯನ್ನು ಭಗವಂತನು ಅವರಿಗೆ ನೀಡಲೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮೃತರ ಗೌರವಾರ್ಥ ಸದನವು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನವು ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಿತು).

2. ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಬೆಂಗಳೂರಿನಲ್ಲಿ ಭಯೋತ್ಪಾದಕರುಗಳ ಚಟುವಟಿಕೆಗಳ ತಡೆಗಟ್ಟುವಿಕೆ.

(1) 102 ಶ್ರೀ ರಾಜೇಂದ್ರನ್ ಎಸ್. (ಕೆ. ಜಿ. ಎಫ್.) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದ ಆವರಣದಲ್ಲಿ ಅಂತರ ರಾಷ್ಟ್ರೀಯ ಸಭೆ ನಡೆಯುತ್ತಿದ್ದಾಗ ಸಂಭವಿಸಿದ ಘಟನೆಗೆ ಸಂಬಂಧಿಸಿದಂತೆ ಎಷ್ಟು ಜನ ಭಯೋತ್ಪಾದಕರನ್ನು ಬಂಧಿಸಲಾಗಿರುತ್ತದೆ ?

ಆ) ರಾಜ್ಯದಲ್ಲಿ ಇಂತಹ ಚಟುವಟಿಕೆಗಳನ್ನು ಹತ್ತಿಕ್ಕಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಇ) ಆತಂಕಗೊಂಡ ಜನ ಸಾಮಾನ್ಯರಿಗೆ ನಂಬಿಕೆ ಬರಲು ಸರ್ಕಾರವು ಯವ ಕ್ರಮ ತೆಗೆದುಕೊಂಡಿರುತ್ತದೆ ?

ಶ್ರೀ ಕುಮಾರಸ್ವಾಮಿ, ಹೆಚ್. ಡಿ. (ಮುಖ್ಯ ಮಂತ್ರಿಗಳು)

ಅ) ದಿನಾಂಕ : 01.01.2006 ರಂದು ಖಚಿತ ಮಾಹಿತಿ ಮೇರೆಗೆ ಲಷ್ಕರ್-ಎ-ತೊಯಿಬಾ ಸಂಘಟನೆಯ ಸದಸ್ಯರಾದ ಮೊಹಮ್ಮದ್ ರಜಿಹೂರ್ ರೆಹಮಾನ್ @ ಅಬ್ದುಲ್ ರೆಹಮಾನ್ @ ಉಮ್ಮೈಸ್ ಬಿನ್ ಸಾಮಸಾಮ ಉದ್ದಿನ್, ವಯಸ್ಸು 35, ವಾಸ ನಂ: 5-10-2, ಬಿ.ಟಿ.ಎಸ್. ನಲಗುಂಡ, ಆಂಧ್ರಪ್ರದೇಶ ಎಂಬುವರನ್ನು ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದ ಆವರಣದಲ್ಲಿ ವಿಜ್ಞಾನಿಗಳ ಮೇಲೆ ನಡೆದು ಘಟನೆಗೆ ಸಂಬಂಧಿಸಿದಂತೆ ಸದಾಶಿವನಗರ ಪೊಲೀಸ್ ಠಾಣೆ, ಬೆಂಗಳೂರು ನಗರ ಅಪರಾಧ ಸಂಖ್ಯೆ : 110/2005 ಕಲಂ 307-25, 27, 28 ಆರ್ಮ್ಸ್ ಆ್ಯಕ್ಟ್ 1969 ಮತ್ತು 4 ಹಾಗೂ 5 ಎಕ್ಸ್‌ಪ್ಲೊಸಿವ್ ಸಬ್‌ಸ್ಟ್ಯೆನ್‌ಷಿನ್ ಆ್ಯಕ್ಟ್ 1908 ರ ಪ್ರಕಾರ ದಾಖಲಾದ ಪ್ರಕರದಲ್ಲಿ ಬಂಧಿಸಲಾಗಿರುತ್ತದೆ.

ಮೇಲ್ಕಂಡ ಪ್ರಕರಣದ ತನಿಖೆಯ ಸಮಯದಲ್ಲಿ ಸದರಿ ಆರೋಪಿಯು ನೀಡಿದ ಮಾಹಿ ಮೇರೆಗೆ ದಿನಾಂಕ : 14.01.2006 ರಂದು ಸದಾಶಿವನಗರ ಪೊ. ಠಾಣೆ ಅಪರಾಧ ಸಂಖ್ಯೆ : 03/2006 ಕಲಂ 122-124(ಎ)-153(ಎ)-153(ಬಿ) ಐಪಿಸಿ ಮತ್ತು 5, 6 ಎಕ್ಸ್‌ಪ್ಲೊಸಿವ್ ಸಬ್‌ಸ್ಟ್ಯೆನ್‌ಷಿಸ್ ಆ್ಯಕ್ಟ್ 1908 ಮತ್ತು 25, 26 ಆರ್ಮ್ಸ್ ಆ್ಯಕ್ಟ್ ಮತ್ತು 10, 11, 13, 16, 18, 19, 20, 23 ಅನ್‌ಲಾಫುಲ್ ಆಕ್ಟಿವಿಟೀಸ್ (ಪ್ರಿವೆನ್‌ಷನ್) ಅಮೆಂಡ್‌ಮೆಂಟ್ ಆ್ಯಕ್ಟ್ 2004 ರಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ. ಈ ಪ್ರಕರಣದಲ್ಲಿ ಮೊಹಮ್ಮದ್ ಇಬ್ರಾಹಿಂ ಚೋಪದಾರ್ ಬಿನ್ ಇಬ್ರಾಹಿಂ ಚೋಪದಾರ್, 35 ವಯಸ್ಸು, ವಾಸ ಹುಸೇನ್ ಪೇಟ್, ಗುಳೇದಗುಡ್ಡ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ದಿನಾಂಕ 15-01.2006 ರಂದು, ಮೊಹಮ್ಮದ್ ಇಫ್ರಾನ್ ಲೇಟ್ ಮೊಹಮ್ಮದ್ ಲುಕ್‌ಮನ್, 22 ವಯಸ್ಸು, ವಾಸ ಮಜೀದ್ ಮೊಹಮ್ಮದ್ದೀಯ ಕುರುಬಪೇಟ್, ಮಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ ಮತ್ತು ಅಪ್ಸರ್ ಪಾಷ ಬಿನ್ ನೂರ್ ಅಹಮ್ಮದ್, 27 ವಯಸ್ಸು, ವಾಸ 15ನೇ ಮುಖ್ಯರಸ್ತೆ ಲಕ್ಕಸಂದ್ರ, ಬೆಂಗಳೂರು ದಿನಾಂಕ:19.01.2006 ರಂದು ದಸ್ತಗಿರಿ ಮಾಡ ಲಾಗಿರುತ್ತದೆ. ಅದೇ ರೀತಿ ನಿಜಾಮುದ್ದೀನ್ @ ಮುನ್ನ ಮತ್ತು ನೂರುಲ್ಲಾಖಾನ್ ವಾಸ ಚಿಂತಾಮಣಿ, ಕೋಲಾರ ಜಿಲ್ಲೆ ದಿನಾಂಕ : 22.01.2006 ರಂದು ಬಂಧಿಸಿದ್ದು, ಚಾಂದ್ ಪಾಷ ಲೇಟ್ ಅಬ್ದುಲ್ ಜಬ್ಬರ್, 47 ವಯಸ್ಸು, ವಾಸ ಸಂಖ್ಯೆ : 96, 13ನೇ ಕ್ರಾಸ್, ಅನ್ವರ್ ಬಡಾವಣೆ, ಕಾಡಗೊಂಡನಹಳ್ಳಿ ಎಂಬುವವರನ್ನು

ದಿನಾಂಕ:28.01.2006 ರಂದು ರಾಜ್ಯದಲ್ಲಿ ಸಾರ್ವಜನಿಕ ಪ್ರಾಣ ಮತ್ತು ಆಸ್ತಿ-ಪಾಸ್ತಿ ಹಾನಿ ಉಂಟಾಗುವಂತಹ ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸುವ ಸಂಚನ್ನು ಹೊಂದಿದ್ದರು ಎಂಬ ಕಾರಣಕ್ಕಾಗಿ ಬಂಧಿಸಲಾಗಿರುತ್ತದೆ.

ಆ) ಇಂತಹ ಚಟುವಟಿಕೆಗಳನ್ನು ಹತ್ತಿಕ್ಕಲು ವಿಧಾನಸೌಧ, ವಿಕಾಸಸೌಧ ಮುಂತಾದ ಪ್ರಮುಖ ಕಟ್ಟಡಗಳಿಗೆ ಭದ್ರತೆ ಬದಗಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಅದೇ ರೀತಿ ರಾಜ್ಯ ಗುಪ್ತವಾರ್ತೆ ಘಟಕದ ಪುನರ್ ವ್ಯವಸ್ಥೀಕರಣ ಮತ್ತು ಉನ್ನತೀಕತಣಕ್ಕಾಗಿ ಸಂಬಂಧಿಸಿದಂತೆ ಪ್ರಸ್ತಾವನೆ ಕಳುಹಿಸಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಇ) ಭಯೋತ್ಪಾದಕರ ಗುಂಪುಗಳನ್ನು ಗುರ್ತಿಸಲು ಮತ್ತು ಅವರ ಚಟುವಟಿಕೆಗಳ ಬಗ್ಗೆ ಗುಪ್ತಮಾಹಿತಿ ಸಂಗ್ರಹಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ರಾಜ್ಯಾದಂತ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನಿಯೋಜಿಸ ಲಾಗಿರುತ್ತದೆ.

ಸರ್ಕಾರದ ವಾಹಿನಿ, ಧಾರ್ಮಿಕ ಕೇಂದ್ರಗಳು. ವಾಣಿಜ್ಯ ಕೇಂದ್ರಗಳು ಅಲ್ಲದೆ ಕೆಲವು ಗಣ್ಯವ್ಯಕ್ತಿಗಳ ಮೇಲೆ ಕೆಲವೊಂದು ಭಯೋತ್ಪಾದಕರ ಗುಂಪುಗಳು ದಾಳಿ ಮಾಡುವ ಸಂಚಿನ ಬಗ್ಗೆ ಗುಪ್ತ ಮಾಹಿತಿಯ ಆಧಾರದ ಮೇಲೆ ಭದ್ರತೆಯನ್ನು ದ್ವಿಗುಣಗೊಳಿಸಲಾಗಿರುತ್ತದೆ. ಈ ನಿಟ್ಟಿನಲ್ಲಿ ಸಾರ್ವಜನಿಕ ಕೈಗಾರಿಕೆ ಉದ್ಯಮಿಗಳ, ಐಟಿ/ಬಿಟಿ ಮತ್ತು ಅನೇಕ ಎಂ.ಎನ್.ಸಿ ಸಂಸ್ಥೆಗಳೊಂದಿಗೆ ರಾಜ್ಯ ಪೊಲೀಸರು ಅನೇಕ ಸಲ ಸಭೆಗಳನ್ನು ನಡೆಸಿರುತ್ತಾರೆ.

ಕರ್ನಾಟಕ ರಾಜ್ಯದ ಮಾನ್ಯ ಮುಖ್ಯ ಮಂತ್ರಿಯವರು ಉನ್ನತ ಮಟ್ಟದ ಸಭೆ ನಡೆಸಿ ರಾಜ್ಯದ ಭದ್ರತೆಯ ಬಗ್ಗೆ ವಿಮರ್ಶೆ ಮಾಡಿರುತ್ತಾರೆ.

ಪೂರಕ ಟಿಪ್ಪಣಿ

ದಿನಾಂಕ:28-12-2005 ರಂದು ಸದಾಶಿವನಗರದ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ಭಾರತೀಯ ವಿಜ್ಞಾನ ಮಂದಿರದ ಆವರಣದಲ್ಲಿ ಒಂದು ಭಯೋತ್ಪಾದನಾ ಘಟನೆ ಸಂಭವಿಸಿರುತ್ತದೆ. ಘಟನೆ ವಿವರ ಈ ಕೆಳಕಂಡಂತಿರುತ್ತದೆ.

ದಿನಾಂಕ:28-12-2005 ರಂದು ಜೆ. ಎನ್. ಟಾಟಾ ಆಡಿಟೋರಿಯಂ ನಲ್ಲಿ ಅಪರೇಷನ್ ರೀಸರ್ಚ್ ಆಪ್ಲಿಕೇಷನ್ ಇನ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್ ಮೆಂಟ್‌ಗೆ ಸಂಬಂಧಪಟ್ಟ ಅಂತರಾಷ್ಟ್ರೀಯ ಸಭೆ ನಡೆಯುತ್ತಿದ್ದ ವೇಳೆಯಲ್ಲಿ ಪಿರ್ಯಾದುದಾರರಾದ ಶ್ರೀ ಬಿ. ಮಧುಸೂದನ್ ರಾವ್, ಲ್ಯಾಬ್‌ನ ಸೆಕ್ಯೂರಿಟಿ ಗಾರ್ಡ್ ಮುನಿನಾರಾಯಣ ಲ್ಯಾಬ್ ಅಸಿಸ್ಟೆಂಟ್ ಸುರೇಶ್ ಮತ್ತು ಪಟೇಲ್

ರವರು ಕರ್ತವ್ಯದ ಮೇಲಿದ್ದು, ಸಭೆಯ ನಂತರ ಸಂಜೆ ಸುಮಾರು 7–20 ಗಂಟೆ ಸಮಯದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು ಟಾಟಾ ಆಡಿಟೋರಿಯಂ ನಿಂದ ಸಮೀಪದಲ್ಲಿರುವ ಸತೀಶ್ ಧವನ್ ಹಾಲ್ ಹತ್ತಿರ ಬರುತ್ತಿದ್ದಾಗ ಆ ಸಮಯದಲ್ಲಿ ಟಾಟಾ ಸಭಾಂಗಣದ ಕಡೆಯಿಂದ ಒಂದೇ ಸಮನೆ ಜೋರಾಗಿ ಸ್ಫೋಟಕದ ಶಬ್ಧ ಕೇಳಿಬಂದಾಗ ಕೂಡಲೇ ಪಿರ್ಯಾದುದಾರರು ಮತ್ತು ಸೆಕ್ಯೂರಿಟಿ ಮುನಿನಾರಾಯಣ ಲ್ಯಾಬಿನಿಂದ ಹೊರಬಂದು ವೀಕ್ಷಿಸಲಾಗಿ ಸ್ಫೋಟದ ಶಬ್ದ ಎಲೆಕ್ಟ್ರಿಕಲ್ ಸಬ್ ಸ್ಟೇಷನ್ ಕಡೆಯಿಂದ ಮಾನ್ಸ್ಯಾಂಟೋ ಗ್ರೀನ್ ಹೌಸ್ ಕಡೆಯಿಂದ ಬಂದಿದ್ದು, ಅದೇ ವೇಳೆಗೆ ಸುಮಾರು 25 ರಿಂದ 30 ವರ್ಷ ವಯಸ್ಸಿನ ತೆಳ್ಳಗೆ ಮೈಕಟ್ಟಿನ ಒಬ್ಬ ವ್ಯಕ್ತಿ ಸಿಕ್ಕಾಪಟ್ಟೆ ಗುಂಡು ಹಾರಿಸಿಕೊಂಡು ಲ್ಯಾಬ್ ಕಡೆ ಬಂದು ಆತನು ಲ್ಯಾಬ್‌ನ ಬಾಗಿಲು ಕಡೆ ಸಹ ಗುಂಡು ಹಾರಿಸಿಲಾಗಿ ಪಿರ್ಯಾದಿದಾರರು ಮತ್ತು ಸೆಕ್ಯುರಿಟಿ ಮುನಿನಾರಾಯಣ ಉತ್ತರದ ಕಂತೆ ಓಡಿ ಹೋದರು. ಪಿರ್ಯಾದಿದಾರರು ನೋಡುತ್ತಿದ್ದಂತೆ ಗುಂಡು ಹಾರಿಸಿದ ವ್ಯಕ್ತಿಯ ಕೈಯಲ್ಲಿ ಗನ್ ಹಿಡಿದುಕೊಂಡು ಪೂರ್ವದ ಕಡೆ ಓಡಿ ಹೋದನು. ನಂತರ ನೋಡಲಾಗಿ ಪಿರ್ಯಾದುದಾರರ ಲ್ಯಾಬ್‌ನಲ್ಲಿ ಕೆಲಸ ಮಾಡುವ ಪ್ರಯೋಗಾಲಯದ ಲ್ಯಾಬ್ ಅಸಿಸ್ಟೆಂಟ್ ಪಟೇಲ್ ಈತನಿಗೆ ಹೊಟ್ಟೆಯ ಬಳಿ ಗುಂಡು ಹೊಕ್ಕಿ, ರಕ್ತದ ಮಡುವಿನಲ್ಲಿ ಬಿದ್ದಿದ್ದು, ಕೂಡಲೇ ಆತನನ್ನು ಆಸ್ಪತ್ರೆಗೆ ಸಾಗಿಸಿದ್ದು ನಂತರ ಪಿರ್ಯಾದುದಾರ ಟಾಟಾ ಸಭಾಂಗಣದ ಬಳಿ ಬಂದಾಗ ಸಮೀಪದಲ್ಲಿ ಒಂದು ಗ್ರೇನೇಡ್ ಮತ್ತು ಅಲ್ಲಲ್ಲಿ ರಕ್ತದ ಕಲೆಗಳು ಬಿದ್ದುದ್ದು ಮತ್ತು ಖಾಲಿ ಗುಂಡುಗಳೂ ಮ್ಯಾಗಜೈನ್‌ಗಳು ಬಿದ್ದಿದ್ದು, ಅಪರಿಚಿತ ವ್ಯಕ್ತಿ ಗುಂಡು ಹಾರಿಸಿದ ಪರಿಣಾಮವಾಗಿ ಕೆಲವರಿಗೆ ತೀವ್ರ ರೀತಿಯ ರಕ್ತ ಗಾಯಗಳಾಗಿರುತ್ತವೆ. ಈ ಬಗ್ಗೆ ಸದಾಶಿವನಗರ ಪೊಲೀಸ್ ಠಾಣೆಯ ಮೊಕದ್ದಮ್ಮೆ ಸಂಖ್ಯೆ : 110/2005 ಕಲಂ 120(ಬ9), 121(ಎ), 122–132–307–302 ಐಪಿಸಿ 24, 27, 28 ಆರ್ಮ್ಸ್ ಆಕ್ಟ್ 4 ಮತ್ತು 5 ಎಕ್ಸ್‌ಪ್ಲೋಸಿವ್ಸ್ ಆಕ್ಟ್ ಪ್ರಕಾರ ಪ್ರಕರಣವನ್ನು ದಾಖಲಿಸಿ ತನಿಖೆಯನ್ನು ಕೈಗೊಳ್ಳಲಾಗಿರುತ್ತದೆ.

ಈ ಘಟನೆಯಲ್ಲಿ ಗಾಯಗೊಂಡ 5 ಜನರ ಪೈಕಿ ನವದೆಹಲಿಯ ಐ.ಟಿ.ಐ.ನ ವಿಜ್ಞಾನಿಯಾದ ಪ್ರೊ.ಎಂ.ಸಿ ಪುರಿ ಎಂಬುವರು ಚಿಕಿತ್ಸೆ ಪಡೆಯುವಾಗ ದಿನಾಂಕ : 29.12.2005 ರಂದು ಮೃತಪಟ್ಟಿರುತ್ತಾರೆ.

ಈ ಘಟನೆಗೆ ಸಂಬಂಧಿಸಿದಂತೆ, ಒಬ್ಬ ಆರೋಪಿಯನ್ನು ಬಂಧಿಸಲಾಗಿದ್ದು, ಆತನು ಲಷ್ಕರ್–ಎ–ತೋಯಿಬಾ ಸಂಘಟನೆಯ ಸದಸ್ಯನೆಂದು ತಿಳಿದುಬಂದಿದೆ. ಸದರಿ ಆರೋಪಿಯ ವಿವರಗಳು ಈ ಕೆಳಗಿನಂತಿವೆ.

ಹೆಸರು : ಮಹಮ್ಮದ್ ರಜಿಹೂರ್ ರೆಹಮಾನ್ @ ಅಬ್ದುಲ್ ರೆಹಮಾನ್ @ ಉಮೇಶ್ ಬಿನ್ ಲೇಟ್ ಮಹಮ್ಮದ್ ಪರಿಸಾಮುದ್ದಿನ್.

ವಯಸ್ಸು : 35 ವರ್ಷ

ವಾಸ : ನಂ. 5–10–82, ಬಿಟಿಎಸ್ ಹತ್ತಿರ, ನಲಗೊಂಡ ಟೌನ್ ಆಂಧ್ರಪ್ರದೇಶ.

ದಸ್ತಗಿರಿ ಮಾಡಿದ ದಿನಾಂಕ : 21–01–2006

ಸದರಿ ಪ್ರಕರಣವು ಇನ್ನೂ ತನಿಖಾ ಹಂತದಲ್ಲಿರುತ್ತದೆ.

ಮೇಲ್ಕಂಡ ಪ್ರಕರಣದ ತನಿಖಾಧಿಕಾರಿಯವರು ಸದರಿ ಆರೋಪಿಯನ್ನು ವಿಚಾರಣೆ ಮಾಡಿದಾಗ ಆರೋಪಿಯು ಮೆಹಬೂಬ್ ಇಬ್ರಾಹಿಂ, ಅಪ್ಸರ್ ಪಾಷ, ಮೊಹಮ್ಮದ್ ಇರ್ಫಾನ್, ನಿಜಾಮುದ್ದಿನ್ @ ಮುನ್ನ, ನೂರುಲ್ಲಾಖಾನ್ ಮತ್ತು ಚಾಂದ್‌ಪಾಷ ಎಂಬುವರೊಂದಿಗೆ ಸೇರಿ ಕರ್ನಾಟಕದ ಇತರೆ ಭಾಗಗಳಲ್ಲಿ ಸಾರ್ವಜನಿಕ ಪ್ರಾಣ ಮತ್ತು ಆಸ್ತಿ ಪಾಸ್ತಿ ಹಾನಿಗೆ ಉಂಟಾಗುವಂತಹ ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸುವ ಸಂಚನ್ನು ಹೊಂದಿದ್ದರು ಎಂದು ತಿಳಿದು ಬಂದ ಕಾರಣ ಈ ಸಂಬಂಧದಲ್ಲಿ ದಿನಾಂಕ : 14.01.2006 ರಂದು ಸದಾಶಿವನಗರ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ : 03/2006 ಕಲಂ 122–124(ಎ)–153(ಎ)–153(ಬಿ) ಭಾ.ದಂ.ಸಂ. ಮತ್ತು ಕಲಂ. 5, 6 ಸ್ಫೋಟಕ ವಸ್ತು ಕಾಯ್ದೆ 1908 ಮತ್ತು ಕಲಂ 25, 26, 28 ಆಯುಧ ಕಾಯ್ದೆ 1969 ಮತ್ತು ಕಲಂ 10, 11, 13, 16, 18, 19, 20, 23 ಕಾನೂನು ಬಾಹಿರ ಚಟುವಟಿಕೆ (ನಿಗ್ರಹ) ಕಾಯ್ದೆ 1967 ರೀತ್ಯಾ ಪ್ರಕರಣ ದಾಖಿಲಾಗಿದ್ದು, ಆರೋಪಿಗಳು ಲಷ್ಕರ್–ಎ–ತೋಯಿಬಾ ಸಂಘಟನೆಯ ಸದಸ್ಯರುಗಳೆಂದು ತಿಳಿದುಬಂದಿದ್ದು, ಈ ಕೆಳಕಂಡಂತಿತೆ ಆರೋಪಿಗಳನ್ನು ಬಂಧಿಸಲಾಗಿರುತ್ತದೆ.

1) ಹೆಸರು : ಮೆಹಬೂಬ್ ಇಬ್ರಾಹಿಂ ಸಾಬ್ ಚೋಪದಾರ್ ಬಿನ್ ಇಬ್ರಾಹಿಂ ಸಾಬ್ ಚೋಷ್‌ದಾರ್.

ವಯಸ್ಸು : 35 ವರ್ಷ.

ವಾಸ : ಹುಸೇನ್ ಪೇಟ್, ಗುಳೇದ ಗುಡ್ಡ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ದಸ್ತಗಿರಿಮಾಡಿದ ದಿ. : 15–01–2006

3) ಹೆಸರು : ಅಪ್ಸರ್ @ ಅಪ್ಸರ್ ಪಾಷ @ ಬಾಷಿರ್‌ದ್ದಿನ್ ಬಿನ್ ನೂರ್ ಅಹಮ್ಮದ್

ವಯಸ್ಸು : 27 ವರ್ಷ.

ವಾಸ : ವೆಂಕಟಗಿರಿಕೋಟೆ, ಟ್ಯಾಂಕ್‌ಬಂಡ್ ರಸ್ತೆ, ಚಿಂತಾಮಣಿ, ಕೋಲಾರ ಜಿಲ್ಲೆ.

ದಸ್ತಗಿರಿ ಮಾಡಿದ ದಿ. : 19-01-2006.

3) ಹೆಸರು : ಮಹಮ್ಮದ್ ಇರ್ಫಾನ್ ಬಿನ್ ಲೇಟ್ ಮಹಮ್ಮದ್ ಲೂಖಮಾನ್.

ವಯಸ್ಸು : 22 ವರ್ಷ

ವಾಸ : ಮಹಮ್ಮದಿಯ ಮಸೀದಿ ಹತ್ತಿರ, ಕುರುಬ್ ಪೇಟೆ, ಮಸೀದಿ ರಸ್ತೆ ಮುಳಬಾಗಿಲು, ಕೋಲಾರ ಜಿಲ್ಲೆ.

ದಸ್ತಗಿರಿ ಮಾಡಿದ ದಿ : 19-01-2006

4) ಹೆಸರು : ನಜ್‌ಮುದ್ದಿನ್ @ ಮುನ್ನ ಬಿನ್ ತಾಜ್ ಉದ್ದೀನ್.

ವಯಸ್ಸು : 24 ವರ್ಷ.

ವಾಸ : ಆರ್.ರಾಜಪ್ಪ ಲೇಔಟ್, ಕೆ. ಜಿ. ಎನ್ ಹೈಸ್ಕೂಲ್ ಹಿಂಭಾಗ, ಚಿಂತಾಮಣಿ ಟೌನ್, ಕೋಲಾರ ಜಿಲ್ಲೆ.

ದಸ್ತಗಿರಿ ಮಾಡಿದ ದಿ. : 22-01-2006.

5) ಹೆಸರು : ಎಂ.ನೂರುಲ್ಲಖಾನ್ @ ನೂರುಲ್ಲ ಬಿನ್ ಲೇ:ಮೆಹಬೂಬ್ ಖಾನ್.

ವಯಸ್ಸು : 24 ವರ್ಷ.

ವಾಸ : ಕೋಯಾ ಬಿಲ್ಡಿಂಗ್ ಹಿಂಭಾಗ, ಕೀರ್ತಿ ನಗರ, ಚೇಳೂರು ರಸ್ತೆ, ಚಿಂತಾಮಣಿ ಟೌನ್, ಕೋಲಾರ ಜಿಲ್ಲೆ

ದಸ್ತಗಿರಿ ಮಾಡಿದ ದಿ. : 22-01-2006

6) ಹೆಸರು : ಚಾಂದ್ ಪಾಷ ಬಿನ್ ಲೇಟ್ ಅಬ್ದುಲ್ ಜಬ್ಬರ್.

ವಯಸ್ಸು : 47 ವರ್ಷ.

ವಾಸ : ಹಳೇ ನಂ. 96, 13ನೇ ಕ್ರಾಸ್. ಅನ್ವರ್ ಲೇಔಟ್, ಕೆ. ಜಿ. ಹಳ್ಳಿ, ಟ್ಯಾನರಿ ರಸ್ತೆ, ಬೆಂಗಳೂರು - 45.

ದಸ್ತಗಿರಿ ಮಾಡಿದ ದಿ. : 28-01-2006.

ಈ ಪ್ರಕರಣದ ವಿವರವಾದ ತನಿಖೆಯನ್ನು ಮುಂದುವರೆಸಲಾಗಿರುತ್ತದೆ.

ಹೆಚ್‌ಡಿ 228 ಎಸ್‌ಎಸ್‌ಟಿ 2006.

ಶ್ರೀ ಎಸ್. ರಾಜೇಂದ್ರನ್ : ಸನ್ಮಾನ್ಯ ಅಧ್ಯಕ್ಷರೆ, the number of terrorists arrested so far in connection with recent attack ..... ಎಂದು ನಾನು ಕೇಳಿದ್ದಕ್ಕೆ ಎಲ್ಲಾ ಹೆಸರುಗಳನ್ನು ಪಟ್ಟಿ ಮಾಡಿ ಕೊಟ್ಟಿದ್ದಾರೆ. The action taken to restrain such activities in the state ಎಂದು ನಾನು

ಕೇಳಿದ್ದೆ. ಇಂತಹ ಇನ್ಸಿಡೆಂಟ್ ಆಗಿ ಒಬ್ಬರು ಸೈಂಟಿಸ್ಟ್ ಸತ್ತು ಹೋಗಿದ್ದಾರೆ. ಅದಕ್ಕೆ ನೀವು ಉತ್ತರ ಕೊಟ್ಟಿರುವುದು ಏನೆಂದರೆ, to tackle the terrorist activities in Bangalore a proposal to provide security to Vidhana Soudha, Vikas Soudha and other buildings is under consideration ಎಂದು ಹೇಳಿದ್ದೀರಿ. ಇನ್ಸಿಡೆಂಟ್ ಆಗಿದ್ದು ಐ.ಐ.ಎಸ್ಸಿಯಲ್ಲಿ ನಿಮ್ಮ ಉತ್ತರದಲ್ಲಿ ಐ.ಐ.ಎಸ್ಸಿಯಲ್ಲಿ ಈ ತರಹ ಆಗಿದೆ, ಆ ಬಿಲ್ಡಿಂಗ್‌ಗೆ ನಾವು ಇಷ್ಟೆಲ್ಲಾ ಸೆಕ್ಯೂರಿಟಿ ಹಾಕಿದ್ದೇವೆ. ಇಷ್ಟು ಇಂಟಲಿಜೆನ್ಸ್ ಅನ್ನು ಅಲ್ಲಿಗೆ ಹಾಕಿದ್ದೇವೆ ಎಂದು ಹೇಳಬೇಕಾಗಿತ್ತು. ಆದರೆ ನೀವು ವಿಧಾನ ಸೌಧ ಮತ್ತು ವಿಕಾಸ ಸೌಧ ಕಟ್ಟಡಗಳಿಗೆ ಸೆಕ್ಯೂರಿಟಿ ಕೊಟ್ಟಿದ್ದೇವೆ ಎಂದು ಉತ್ತರ ಕೊಟ್ಟಿದ್ದೀರಿ, ಇದು ಸರಿಯಲ್ಲ The intelligence has totally failed. ನಿಮ್ಮ ಇಂಟಲಿಜೆನ್ಸ್ ಹೇಗಿದೆ ಎಂದರೆ, ಯಾರ್‍ಯಾರು ಯಾವುದಕ್ಕೆ ಸೈನ್ ಮಾಡಿದ್ದಾರೆ ಯಾರ್‍ಯಾರು...

ಅಧ್ಯಕ್ಷರು : ತಾವು ಈ ತರಹ ಮಾತನಾಡುವುದು ಸರಿಯಲ್ಲ. ಉಪ ಪ್ರಶ್ನೆ ಏನದರೂ ಇದ್ದರೆ ತಾವು ಕೇಳಿ.

ಶ್ರೀ ಎಸ್. ರಾಜೇಂದ್ರನ್ : ಇನ್ನೂ Consideration ಎಂದು ಹೇಳಿದ್ದೀರಿ. ಅಲ್ಲಿ ಒಬ್ಬರು ಸೈಂಟಿಸ್ಟ್ ಸತ್ತು ಹೋಗಿದ್ದಾರೆ ಆದಾಗ್ಯೂ ಅಲ್ಲಿ ಸರಿಯಾದ ಸೆಕ್ಯೂರಿಟಿ ಮೆಶರ್ಸ್ ತೆಗೆದುಕೊಂಡಿಲ್ಲ. ಈ ಇಂಟಲಿಜೆನ್ಸ್ ಎಂದರೆ ಅದು ಬರೇ ಸ್ಟೇಟ್ ಗೌರ್ನಮೆಂಟ್‌ದೋ ಅಥವಾ ಸೆಂಟ್ರಲ್ ಗೌರ್ನಮೆಂಟ್‌ದೋ? ಈ ತರಹದ ಚಟುವಟಿಕೆಗಳನ್ನು ಹತ್ತಿಕ್ಕಲು POTA Act ತರಹ ಏನಾದರೂ ಒಂದು Act ತರುತ್ತೀರಾ? ಅಲ್ಲಿ ಒಳ್ಳೆಯ ಇಂಟಲಿಜೆನ್ಸ್ ಇಟ್ಟು ACP or DCP rank ಅಧಿಕಾರಿಯನ್ನು ನೇಮಿಸುತ್ತೇವೆ ಎಂದು ಸರ್ಕಾರ ಹೇಳಲಿ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ. 28-12-2005 ರಂದು ಸದಾಶಿವ ನಗರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವಂತಹ ಭಾರತೀಯ ವಿಜ್ಞಾನ ಭವನದ ಆವರಣದಲ್ಲಿ ನಡೆದಂತಹ ಘಟನೆ ಬಗ್ಗೆ ಸನ್ಮಾನ್ಯ ಸದಸ್ಯರು ಕೇಳಿರತ್ಕಕಂತಹ ವಿಷಯ ಎನೆದೆ, ಎಷ್ಟು ಜನ ಭಯೋತ್ಪಾದಕರನ್ನು ಬಂಧಿಸಲಾಗಿದೆ ಎಂದು ಕೇಳಿದ್ದಾರೆ. ದಿನಾಂಕ:01-01-2006 ರಂದು ಬಂದ ಖಚಿತ ಮಾಹಿತಿ ಮೇಲೆ ಲಷ್ಕರ್-ಎ-ತೊಯಿಬಾ ಸಂಘಟನೆ ಸದಸ್ಯರಾದ ಮೊ:ರಜಿಹೂರ್ ರೆಹಮಾನ್ ಅಲಿಯಾಸ್ ಅಬ್ದುಲ್ ರೆಹಮಾನ್ ಅಲಿಯಾಸ್ ಉಮ್ಮೈಸ್ ಬಿನ್ ಸಾಮ ಸಾಮ ಉದ್ದಿನ್, ವಯಸ್ಸು 35 ಬಿಟಿಎಸ್ ನಲಗುಂದ, ಆಂಧ್ರಪ್ರದೇಶ ಇವರನ್ನು ವಿಜ್ಞಾನಿಗಳ ಮೇಲೆ ನಡೆದು ಘಟನೆಗೆ ಸಂಬಂಧಿಸಿದಂತೆ ಸದಾಶಿವ ನಗರದ ಪೊಲೀಸ್

ಠಾಣೆ, ಬೆಂಗಳೂರು ನಗರ ಅಪರಾಧ ಸಂಖ್ಯೆ 110:5 ಕಲಂ 307–25, 27, 28 ಆರ್ಮ್ಸ್ ಆ್ಯಕ್ಟ್ 1969 ಮತ್ತು 4 ಹಾಗೂ 5 ಎಕ್ಸ್‌ಪ್ಲೋಸಿವ್ Substances Act 1908ರ ಪ್ರಕಾರ ಬಂಧಿಸಲಾಗಿದೆ. ಮೇಲ್ಕಂಡ ಪ್ರಕರಣದ ತನಿಖೆ ನಂತರ ತನಿಖೆಯ ಸಮಯದಲ್ಲಿ ಸದರಿ ಆರೋಪಿ ನೀಡಿದ ಮಾಹಿತಿ ಮೇರೆಗೆ ಮತ್ತೆ ಐದು ಜನರಿಗೆ ಬಂಧಿಸಲಾಗಿದೆ. ಈ ವಿಷಯದಲ್ಲಿ ಕೆಲವು ಮಾಹಿತಿಗಳನ್ನು ಪಡೆದುಕೊಂಡಿದ್ದಾರೆ. ಇವತ್ತು ಪೊಲೀಸ್ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ತಾವು ಇಂಟಲಿಜೆನ್ಸ್ ವಿಷಯದಲ್ಲಿ ಫೈಲ್ಯೂರ್ ಎಂದು ಏನು ಹೇಳುತ್ತೀರಿ, ಭಾರತೀಯ ವಿಜ್ಞಾನ ಸಂಸ್ಥೆ ಮೇಲೆ ಇವತ್ತು ಅಟ್ಯಾಕ್ ಮಾಡುತ್ತಾರೆಂದು ಇಂಟಲಿಜೆನ್ಸ್ ರಿಪೋರ್ಟ್ ಇರಲಿಲ್ಲ, ಬೆಂಗಳೂರು ನಗರದಲ್ಲಿ ಈ ಘಟನೆ ನಡೆದ ನಂತರ ಈ ವಿಷಯದಲ್ಲಿ ತಾವು ಈಗ ಏನು ಪ್ರಸ್ತಾಪ ಮಾಡಿದಿರಿ, ವಿಧಾನ ಸೌಧ ಮತ್ತು ವಿಕಾಸ ಸೌಧದ ಭದ್ರತೆ ಬಗ್ಗೆ ತಾವು ಏನು ಚರ್ಚೆ ಮಾಡಿದಿರಿ, ಅದರ ಜೊತೆಗೆ ರಾಜ್ಯ ಗುಪ್ತ ಘಟಕದ ಪುನರ್ ವ್ಯವಸ್ಥೀಕರಣ ಮತ್ತು ಉನ್ನತೀಕರಣ ವ್ಯವಸ್ಥೆಗೆ ಸಂಬಂಧಿಸಿದಂತೆ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ. ಅದರ ಬಗ್ಗೆ ಸರ್ಕಾರ ಪರಿಶೀಲನೆ ನಡೆಸುತ್ತಿದೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಇಂಟಲಿಜೆನ್ಸ್ ಫೈಲ್ಯೂರ್ ಎಂದು ಏಕೆ ಹೇಳುತ್ತಿದ್ದೇನೆ ಎಂದರೆ, Prime Minister ರವರು ಇಲ್ಲಿ ಫ್ಲ್ಯಾಗ್ ಹಾಯಿಸ್ಟ್ ಮಾಡುವುದಕ್ಕೆ ಬಂಬಂತಹ ಸಂದರ್ಭದಲ್ಲಿ ಸಪೋಸ್ Tibetan ನವನು ಒಂದು ರೈಫಲ್ ತೆಗೆದುಕೊಂಡು ಬಂದು ಶೂಟ್ ಮಾಡಿದ್ದರೆ ಏನು ಮಾಡುತ್ತಿದ್ದೀರಿ, ಅವತ್ತಿನಿಂದ ಇಂಟಲಿಜೆನ್ಸ್‌ನವರು ಹುಷಾರಾಗಿರ ಬೇಕಾಗಿತ್ತು. ಅವರು They have not. That is why the Intelligence has failed. ಅವರು ಅವತ್ತೇ ಪ್ರಯತ್ನ ಮಾಡಿದ್ದರೆ, ಅವತ್ತೇ ಸೆಕ್ಯುರಿಟಿ ಟೈಟ್ ಮಾಡಿದ್ದರೆ, ಈ ಇನ್ಸಿಡೆಂಟ್ ಆಗುತ್ತಾ ಇರಲಿಲ್ಲ. What action you have taken against them. what future action you are going to take for the security measures ? What is you upgradation for the security? What is the importances that you are going to give to the security as pect?

ಶ್ರೀ ಆರ್. ರೋಷನ್ ಬೇಗ್ (ಜಯಮಹಲ್): ಮಾನ್ಯ ಅಧ್ಯಕ್ಷರೆ, ಈಗ ತಾನೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಾಗ ಸ್ಪಷ್ಟವಾಗಿ ಒಂದು ಮಾತು ಹೇಳಿದರು. ನಮಗೆ ಈ ಬಗ್ಗೆ ಸ್ಪಷ್ಟವಾದ ಇಂಟಲಿಜೆನ್ಸ್ ಮಾಹಿತಿ ಇರಲಿಲ್ಲ. ಎಂದು ಅದರ ಬಗ್ಗೆ ನಾನು ಸೀರಿಯಸ್ಸಾಗಿ ಒಂದು ಪ್ರಶ್ನೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಕೇಳುತ್ತೇನೆ. ಕೇಂದ್ರ ಗೃಹ ಮಂತ್ರಿ ಮಾನ್ಯ ಶಿವರಾಜ್

ಪಾಟೀಲರು ಲೋಕಸಭೆಯಲ್ಲಿ ಒಂದು ಹೇಳಿಕೆ ಕೊಟ್ಟಿದ್ದಾರೆ. State Government were informed of the impending attack. ಇಂತಹ ಇನ್‌ಸಿಡೆಂಟ್ ಆಗಬಹುದು ಎಂದು ಬೆಂಗಳೂರಿನಲ್ಲಿ ಎಂದು ನಾವು ಸ್ಟೇಟ್ ಗವರ್ನ್‌ಮೆಂಟ್‌ಗೆ ತಿಳಿಸಿದೆವು ಎಂದು ಮಾನ್ಯ ಶಿವರಾಜ್ ಪಾಟೀಲರು ಸದನದಲ್ಲಿ ಹೇಳಿದರು. ಆಗ ಬೆಂಗಳೂರಿನಲ್ಲಿ ನಮ್ಮ ಪೊಲೀಸ್ ಆಫೀಸರ್ಸ್ ಏನು ಹೇಳಿದರು ಎಂದರೆ, ಇಲ್ಲ ಇಂತಹ ಮಾಹಿತಿ ನಮಗೆ ಬರಲಿಲ್ಲ ಎಂದು. ಈಗ ಮುಖ್ಯ ಮಂತ್ರಿಗಳೂ ಕೂಡ ಹೇಳುತ್ತಿದ್ದಾರೆ, ನಮಗೆ ಏನೂ ಮಾಹಿತಿ ಬಂದಿಲ್ಲ ಎಂದು ಯಾರೂ ಸುಳ್ಳು ಹೇಳುತ್ತಿದ್ದಾರೆ. ಮಾನ್ಯ ಶಿವರಾಜ್ ಪಾಟೀಲರು ಲೋಕ ಸಭೆಯಲ್ಲಿ ಈ ಹೇಳಿಕೆ ಕೊಟ್ಟ ಮೇಲೆ ಇದು ಯಾರು ಸುಳ್ಳು ಹೇಳುತ್ತಿದ್ದಾರೆ, ಸ್ಟೇಟ್ ಪೊಲೀಸ್ ಆಫೀಸರ್ಸ್ ಸುಳ್ಳು ಹೇಳುತ್ತಿದ್ದಾರಾ; ಡಿಐಜಿ ಇಂಟಲಿಜೆನ್ಸ್ ಮತ್ತು ಐಜಿಪಿ ಇಂಟಲಿಜೆನ್ಸ್ ಇವರ ಕೆಲಸ ಬರೀ ಮುಖ್ಯ ಮಂತ್ರಿಗಳಿಗೆ ಕಿವಿಯಲ್ಲಿ ಹೋಗಿ ಹೇಳುವುದಾ? I will not be surprised if, ಕೆಲವು ಎಡಿಜಿಪಿ ಇಂಟಲಿಜೆನ್ಸ್ ಆಗಿದ್ದವರು ನಾಳೆ ರಿಪಬ್ಲಿಕ್ ಡೇ ಬಂದರೆ ಅವರಿಗೆ ಪ್ರೆಸಿಡೆಂಟ್‌ರಿಂದ ಮೆಡ್ಲ್ ಸಿಗುತ್ತದೆ. ಯಾವ ಇಂಟಲಿಜೆನ್ಸ್ ಆಫೀಸರ್ ಮೇಲೆ ಆ್ಯಕ್ಷನ್ ತೆಗೆದುಕೊಂಡಿದ್ದೀರಿ? ಮಾನ್ಯ ಶಿವರಾಜ್ ಪಾಟೀಲರು ಸದನದಲ್ಲಿ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಇಂಟಲಿಜೆನ್ಸ್ ಫೇಲ್ ಆಗಿದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಧರ್ ಏನ್ನುವವರು ಬರೆದಿರುವ ಪುಸ್ತಕದಲ್ಲಿ ನಾಗಾಲ್ಯಾಂಡ್ ಆದ ಮೇಲೆ ಅಸ್ಸಾಂ, ಆದಮೇಲೆ, Bangalore is the area; Karnataka is the core area selected for attack. ಎಂದು ಒಂದು ಪುಸ್ತಕ ಪಬ್ಲಿಷ್ ಆಗಿರುವುದರಲ್ಲಿ ಇತ್ತು. ನಾನು ಅವರಿಗೆ ಆ ಪುಸ್ತಕ ಕೊಡಿ ಎಂದರೆ ಅದು ಸಿಗಲಿಲ್ಲ. ಸ್ಪಷ್ಟವಾಗಿ ಒಬ್ಬ ಜಾಯಿಂಟ್ ಡೈರೆಕ್ಟರ್ ಆಫ್ ಸಿಬಿಐ ಬರೆದಿರುವ ಪುಸ್ತಕದಲ್ಲಿ ಹೇಳುತ್ತಾರೆ. Next target is Karnataka. I have no grouse against the Commissioner of Police. We have a wonderful Commissioner. ಇಂಟಲಿಜೆನ್ಸ್ ಏನಾಗಿದೆ, ಇಂಟಲಿಜೆನ್ಸ್‌ನಲ್ಲಿ ನೀವು ಎಲ್ಲಾ ಅನ್‌ವಾಂಟೆಡ್ ಜನಗಳನ್ನು ಇಟ್ಟುಕೊಂಡಿದ್ದೀರಿ. ಪೊಲೀಸ್ ಇಲಾಖೆಯನ್ನು ಶಕ್ತಿಯುತವಾಗಿ ಮಾಡಲಿಲ್ಲ. ಎಲ್ಲಕ್ಕಿಂತ ಹೆಚ್ಚಿನ ಶಕ್ತಿಯನ್ನು ಇಂಟಲಿಜೆನ್ಸ್‌ಗೆ ಕೊಡಬೇಕಾದ ಸ್ಥಿತಿಗೆ ಬೆಂಗಳೂರು ಬಂದಿದೆ. ಈ ತರಹ ಟೆರರಿಸ್ಟ್ ಆ್ಯಕ್ಟಿವಿಟೀಸ್ ಬೆಂಗಳೂರಿನಲ್ಲಿ ನಡೆಯುತ್ತಿದೆ. ಸೆಮಿ ಇಂಟಲಿಜೆನ್ಸ್ ಆ

ಬಗ್ಗೆ ತಾವು ಏನೇನು ಮಾಹಿತಿ ಪಡೆದುಕೊಂಡಿದ್ದೀರಿ ಏನು ಆ್ಯಕ್ಷನ್ ತೆಗೆದುಕೊಂಡಿದ್ದೀರಿ ಎಂದು ಹೇಳಬೇಕು.

ಅಧ್ಯಕ್ಷರು : ಎಲ್ಲರೂ ಕೇಳುವುದಕ್ಕೆ ನಿಂತರೆ ಹೇಗೆ ಒಂದು ಗಂಟೆಯ ಒಳಗಡೆ ನಾನು ಪ್ರಶ್ನೋತ್ತರ ವೇಳೆಯನ್ನು ಮುಗಿಸಬೇಕು. ಇದರ ಬಗ್ಗೆ ಬಹಳ ಜನ ಮಾತನಾಡುವುದಕ್ಕೆ ಇಷ್ಟ ಪಡುತ್ತಿರುವುದರಿಂದ ಅದನ್ನು ನಾನು ಅರ್ಧ ಗಂಟೆ ಚರ್ಚೆಗೆ ಒಳಪಡಿಸುತ್ತೇನೆ. ಏಕೆಂದರೆ, ಒಂದು ಗಂಟೆಯ ಒಳಗೆ ಪ್ರಶ್ನೋತ್ತರ ಅವಧಿ ಮುಗಿಯಬೇಕು. ಈ ಪ್ರಶ್ನೆಯನ್ನು ಅರ್ಧ ಗಂಟೆ ಚರ್ಚೆಗೆ ಬಳಸೋಣ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಶಿವರಾಜ್ ಪಾಟೀಲ್ ಸಾಹೇಬರು ಪತ್ರ ಬರೆದ ಸಮಯದಲ್ಲಿ ಇವರು ಮುಖ್ಯ ಮಂತ್ರಿಗಳಾಗಿರಲಿಲ್ಲ. ಮಾನ್ಯ ಧರ್ಮ ಸಿಂಗ್‌ರವರು ಮುಖ್ಯ ಮಂತ್ರಿಗಳಾಗಿದ್ದರು.

ಅಧ್ಯಕ್ಷರು : ನಾನು ಇದಕ್ಕೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆ.

ಮುಂಡರಗಿ ತಾಲ್ಲೂಕಿನಲ್ಲಿ ಶಾಲಾ ಮಕ್ಕಳಿಗೆ ಹಂಚುವ ಆಹಾರ ಧಾನ್ಯ ದುರುಪಯೋಗದ ಪುನರ್ ವಿಚಾರಣೆ.

(2)(4) ಶ್ರೀ ಎಸ್.ಎಸ್.ಪಾಟೀಲ್ (ಮುಂಡರಗಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಮುಂಡರಗಿ ತಾಲ್ಲೂಕು ಹಾರೋಗೇರಿ ಗ್ರಾಮದಲ್ಲಿ ಶಾಲಾಮಕ್ಕಳಿಗೆ ಹಂಚುವ ಆಹಾರಧಾನ್ಯವನ್ನು ಶಾಲಾ ಮಕ್ಕಳಿಗಾಗಿ ಹಂಚದೇ ಆ ಗ್ರಾಮದ ವ್ಯವಸಾಯ ಸೇವಾ ಸಹಕಾರ ಬ್ಯಾಂಕಿನ ಕಾರ್ಯದರ್ಶಿ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಪುನರ್ ವಿಚಾರಣೆ ಮಾಡಿ ಕ್ರಮ ಕೈಗೊಳ್ಳ ಲಾಗಿದೆಯೇ;

2) ಪುನರ್ ವಿಚಾರಣೆ ಮಾಡಿದ್ದರೆ ಅವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ ಹಾಗೂ ಕ್ರಮ ಕೈಗೊಳ್ಳದಿದ್ದರೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು)

1) ಹೌದು.

2) ಕನಾಟಕ ಕೇಂದ್ರ ಸಹಕಾರ ಬ್ಯಾಂಕಿನ (ಕೆ.ಸಿ.ಸಿ.ಬ್ಯಾಂಕ್) ಸಾಮಾನ್ಯ ಪದವ್ಯಂದ ಸಮಿತಿಯು ಸದರಿ ಕಾರ್ಯದರ್ಶಿಯ ಅಮಾನತ್ತು ಅವಧಿಯನ್ನು ವೇತನ ರಹಿತ ರಜೆಯೆಂಬುದಾಗಿ ಪರಿಗಣಿಸಿದೆ. ಗದಗ್ ಜಿಲ್ಲಾಧಿಕಾರಿಯವರು ಸದರಿ ಕಾರ್ಯದರ್ಶಿಯವರಿಂದ ರೂ, 29,358/– ರಷ್ಟು ಮೌಲ್ಯದ ಅಕ್ಕಿ